20/3/17 P.3

## ಬೆಸ್ಕಾಂ ಸಿಬ್ಬಂದಿ ಸ್ಪಂದನೆ ಇಲ್ಲ



**ವಾರ್ಡ್‌ನ ಬಹುತೇಕ ಕಡೆ ಅಪಾಯಕಾರಿ ಮರದ ಕೊಂಬೆಗಳಿಂದ ಆತಂಕ ಎದುರಾಗಿದೆ. ಕೊಂಬೆಗಳ ತೆರವಿಗೆ ಮುಂದಾದರೆ ಬೆಸ್ಕಾಂ ಸಿಬ್ಬಂದಿ ವಿದ್ಯುತ್ ಸರಬರಾಜು ಸ್ಥಗಿತಗೊಳಿಸುವುದಿಲ್ಲ. ಸಿಬ್ಬಂದಿ ಅಸಹಕಾರದಿಂದ ತೊಂದರೆಯಾಗಿದೆ.**

**| ಮುನೇಗೌಡ**

ಇಲಾಖೆಗಳ ನಡುವೆ ಸಮನ್ವಯತೆ ಇರಬೇಕು. ಮರದ ಕೊಂಬೆ ತೆರವು ಕಾರ್ಯಾಚರಣೆ ವೇಳೆ ಬಿಬಿಎಂಪಿ ಅಧಿಕಾರಿಗಳ ಬೆಸ್ಕಾಂಗೆ ಮಾಹಿತಿ ನೀಡಬೇಕು. ಬೆಸ್ಕಾಂ ಸಿಬ್ಬಂದಿ ತಾತ್ಕಾಲಿಕವಾಗಿ ವಿದ್ಯುತ್ ಸ್ಥಗಿತಗೊಳಿಸಿ ಕಾರ್ಯಾಚರಣೆಗೆ ಅನುವು ಮಾಡಿಕೊಡಬೇಕು. ಒಟ್ಟಾರೆ ಸಾರ್ವಜನಿಕರ ಸೇವೆಗೆ ಸಿದ್ಧರಿರಬೇಕು ಎಂದು ಕಾರ್ಪೊರೇಟರ್ ಇಂದಿರಾ ಸಲಹೆ ನೀಡಿದರು.

20/03/17 —ಶಿಡ್ಲ, ಕೋಲಾರ

## ಕರೆಂಟ್ ತೆಗೆಯಬೇಡಿ

ಇದು ಪರೀಕ್ಷೆ ಸಮಯವಾದ್ದರಿಂದ ಸಂಜೆ ವೇಳೆ ವಿದ್ಯುತ್ ಕಡಿತ ಮಾಡಬೇಡಿ. ಟ್ರಾನ್ಸ್‌ಫಾರ್ಮರ್ ಸುಟ್ಟುಹೋದರೆ ಗಂಟೆಗಟ್ಟಲೇ ಕರೆಂಟ್ ತೆಗೆಯುತ್ತಾರೆ. ಸಮಯಕ್ಕೆ ಸರಿಯಾಗಿ ಟ್ರಾನ್ಸ್‌ಫಾರ್ಮರ್ ಸರಿಪಡಿಸಿ ಅಥವಾ ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಸಿ. ಕರೆಂಟ್ ತೆಗೆದು ವಿದ್ಯಾರ್ಥಿಗಳಿಗೆ ತೊಂದರೆ ಆಗುವುದನ್ನು ತಪ್ಪಿಸಿ.

—ಕೆಂಪೇಗೌಡ, [illegible]

K.P. page No 5 20.3.

# ಕೆಪಿಟಿಸಿಎಲ್ ಆಸ್ತಿ ರಕ್ಷಿಸಿದ್ದಕ್ಕೆ ಬಡ್ತಿ ತಡೆ ಶಿಕ್ಷೆ

## ಹೈಕೋರ್ಟ್ ಮೆಟ್ಟಿಲೇರಿದ ಅಧಿಕಾರಿ

■ **ವೆಂಕಟೇಶ್ ಕಲಿಪಿ** ಬೆಂಗಳೂರು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ (ಕೆಪಿಟಿಸಿಎಲ್) ಸೇರಿದ 146 ಟ್ರಾನ್ಸ್‌ಫಾರ್ಮರ್‌ಗಳ ಅಕ್ರಮ ಸಾಗಣೆ ತಡೆಹಿಡಿದಿದ್ದಕ್ಕೆ ಹಿರಿಯ ಅಧಿಕಾರಿಗಳು ತಮಗೆ ಕೊಟ್ಟ ಬಹುಮಾನ 'ದುರ್ನಡತೆ ಮತ್ತು ಸಿಬ್ಬಂದಿಗೆ ಕಿರುಕುಳ ನೀಡಿದ ಆರೋಪದ ಪಟ್ಟ. ಅಲ್ಲದೆ, ಬಡ್ತಿ ತಡೆ ಶಿಕ್ಷೆ.'

- **ಬೆಸ್ಕಾಂ ಅಧಿಕಾರಿ ರಾಮಸ್ವಾಮಿ ವಿರುದ್ಧ ದುರ್ನಡತೆ, ಸಿಬ್ಬಂದಿಗೆ ಕಿರುಕುಳ ಇಲಾಖಾ ತನಿಖೆ**
- **ಬಡ್ತಿ ತಡೆ ಹಿಡಿಯದಂತೆ ಮಧ್ಯಂತರ ಆದೇಶ**



—ಹೀಗೆಂದು ಆರೋಪಿಸಿ ಬೆಸ್ಕಾಂ ಉಪ ಪ್ರಧಾನ ವ್ಯವಸ್ಥಾಪಕ (ಕಾರ್ಯಾಚರಣೆ) ಎಂ.ಎಸ್.ರಾಮಸ್ವಾಮಿ ಹೈಕೋರ್ಟ್ ಮೆಟ್ಟಿಲೇರಿ ಅಳಲು ತೋಡಿಕೊಂಡಿದ್ದಾರೆ. ಅಲ್ಲದೆ, ಹಿರಿಯ ಅಧಿಕಾರಿಗಳಿಗೆ ತಿಳಿಸದೆ ಟ್ರಾನ್ಸ್‌ಫಾರ್ಮರ್‌ಗಳ ಅಕ್ರಮ ಸಾಗಣೆ ಕುರಿತು ಪೊಲೀಸ್ ದೂರು ದಾಖಲಿಸಿದ, ಸಿಬ್ಬಂದಿಗೆ ಕಿರುಕುಳ ಕೊಟ್ಟ ಮತ್ತು ವರ್ಗಾವಣೆಯ ಆದೇಶ ಪಾಲಿಸದೆ ದುರ್ನಡತೆ ತೋರಿದ ಆರೋಪ ಸಂಬಂಧ ತನ್ನ ವಿರುದ್ಧ ನಡೆಯುತ್ತಿರುವ ಇಲಾಖಾ ವಿಚಾರಣೆ ರದ್ದುಪಡಿಸುವಂತೆ ಮೊರೆಯಿಟ್ಟಿದ್ದಾರೆ. ರಾಮಸ್ವಾಮಿ ಅವರ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಿ.ನರೇಂದರ್ ಅವರಿದ್ದ ಏಕಸದಸ್ಯ ಪೀಠ, 'ಅರ್ಜಿದಾರರ ವಿರುದ್ಧ ಕೆಪಿಟಿಸಿಎಲ್ ಮಾಡಲಾಗಿರುವ ದೋಷಾರೋಪ ಪಟ್ಟಿ ಮತ್ತು ಇಲಾಖಾ ವಿಚಾರಣೆಗೆ ಹೊರಡಿಸಿದ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಜತೆಗೆ, ಈ ಆರೋಪಗಳನ್ನು ಮುಂದಿಟ್ಟುಕೊಂಡು ರಾಮಸ್ವಾಮಿಯ ಬಡ್ತಿ ತಡೆಹಿಡಿಯಬಾರದು ಎಂದು ಕೆಪಿಟಿಸಿಎಲ್ ಹಾಗೂ ಬೆಸ್ಕಾಂಗೆ ಮಧ್ಯಂತರ ಆದೇಶ ಮಾಡಿದೆ.

ಹಾಗೆಯೇ, ಅರ್ಜಿ ಕುರಿತು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ, ನಿರ್ದೇಶಕ (ಆಡಳಿತ ಹಾಗೂ ಎಚ್‌ಆರ್‌ಡಿ), ಯಲಹಂಕದ ಗುತ್ತಿಗೆದಾರರಾದ ಗಜಾನನ ಪವರ್ ಕಂಟ್ರೋಲ್ ಪ್ರೈ.ಲಿ. ಸಂಸ್ಥೆಯ ಮಾಲೀಕ ನಾಗರಾಜ್, ರಾಜ್ಯ ಹೆದ್ದಾರಿ ಯೋಜನಾ ಅನುಷ್ಠಾನದ ಮುಖ್ಯ ಕಾರ್ಯಕಾರಿ ಅಧಿಕಾರಿ ಪಿ.ಮಣಿವಣ್ಣನ್ ಮತ್ತು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕರಿಗೆ ನೋಟಿಸ್ ಜಾರಿ ಮಾಡಿದೆ.

ಅರ್ಜಿ ವಿಚಾರಣೆ ವೇಳೆ ರಾಮಸ್ವಾಮಿ ಪರ ವಕೀಲ ಗಂಗಾಧರ ಸಂಗೊಳ್ಳಿ ವಾದ ಮಂಡಿಸಿ, 'ಅರ್ಜಿದಾರ 2013ರಲ್ಲಿ ಕೋಲಾರದ ವೃತ್ತದ ಕೆಪಿಟಿಸಿಎಲ್ ಎಂಜಿನಿಯರ್ ಅಧೀಕ್ಷಕರ ಕಚೇರಿಯಲ್ಲಿ ಕಾರ್ಯಕಾರಿ ಎಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 2013ರ ಜ.31ರಂದು ಗಜಾನನ ಪವರ್ ಕಂಟ್ರೋಲ್ ಪ್ರೈ.ಲಿ. ಕಂಪನಿಯ ಮಾಲೀಕ ಹಾಗೂ ಗುತ್ತಿಗೆದಾರ ನಾಗರಾಜು, ಕೋಲಾರ ವಿಭಾಗದ ಸ್ಟೋರ್ ಕಚೇರಿಯಲ್ಲಿದ್ದ ವಿವಿಧ ಸಾಮರ್ಥ್ಯದ 146 ಟ್ರಾನ್ಸ್‌ಫಾರ್ಮರ್‌ಗಳನ್ನು ಸಾಗಿಸುತ್ತಿದ್ದರು. ರಾಮಸ್ವಾಮಿ, ಕೆಪಿಟಿಸಿಎಲ್‌ನಿಂದ ಟ್ರಾನ್ಸ್‌ಫಾರ್ಮರ್‌ಗಳನ್ನು ಬಿಡುಗಡೆಯ ರೀತಿಯ ಬಗ್ಗೆ ಗುತ್ತಿಗೆದಾರರಲ್ಲಿ ದಾಖಲೆ ಕೇಳಿದ್ದರು. ಆದರೆ, ಗುತ್ತಿಗೆದಾರ ದಾಖಲೆಗಳನ್ನು ತೋರಿಸಲಿಲ್ಲ. ಇದರಿಂದ ಟ್ರಾನ್ಸ್‌ಫಾರ್ಮರ್‌ಗಳನ್ನು ಅಕ್ರಮವಾಗಿ ಸಾಗಿಸುತ್ತಿರುವುದು ದೃಢಪಟ್ಟಿತ್ತು.

ಇದನ್ನು ಪರಿಗಣಿಸದ ದುರ್ನಡತೆ ಮತ್ತು ಸಿಬ್ಬಂದಿಗೆ ಕಿರುಕುಳ ನೀಡಿದ ಹಾಗೂ ವರ್ಗಾವಣೆ ಆದೇಶ ಪಾಲಿಸದ ಸಂಬಂಧ ರಾಮಸ್ವಾಮಿ ವಿರುದ್ಧ 2013ರ ನ.16ರಂದು ದೋಷಾರೋಪ ಪಟ್ಟಿ ಹೊರಿಸಿ, ಬೆಸ್ಕಾಂನಲ್ಲಿ ಬಡ್ತಿ ತಡೆ ಹಿಡಿಯಲಾಯಿತು. ಇದನ್ನು ಪ್ರಶ್ನಿಸಿದ್ದಕ್ಕೆ 2017ರ ಜ.1ರಂದು ದೋಷಾರೋಪಗಳ ವಿಚಾರಣೆಗೆ ನಿವೃತ್ತ ಸೆಷನ್ಸ್ ನ್ಯಾಯಾಧೀಶರ ಸಮಿತಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ. ರಾಮಸ್ವಾಮಿ ವಿರುದ್ಧದ ವಿಚಾರಣೆ ಹಾಗೂ ದೋಷಾರೋಪ ಪಟ್ಟಿ ರದ್ದುಪಡಿಸುವಂತೆ ಕೋರಿದರು.